# Akashvani : Bangalore
# National Bulletin In Kannada
# 08.01.2025 / 7.35 am

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**08.01.2025 / 7.35 am**

**<><*<><>*><>**

<u>ಮುಖ್ಯಾಂಶಗಳು</u>

೧. ಆಂಧ್ರಪ್ರದೇಶಕ್ಕೆ ಇಂದು ಪ್ರಧಾನಿ ನರೇಂದ್ರ ಮೋದಿ ಭೇಟಿ: ೨ ಲಕ್ಷ ಕೋಟಿ ರೂಪಾಯಿ ವೆಚ್ಚದ ವಿವಿಧ ಯೋಜನೆಗಳಿಗೆ ಚಾಲನೆ

೨. ಇಸ್ರೋದ ನೂತನ ಅಧ್ಯಕ್ಷರಾಗಿ ವಿ.ನಾರಾಯಣನ್ ಆಯ್ಕೆ; ಇದೇ ೧೪ ರಂದು ಅಧಿಕಾರ ಸ್ವೀಕಾರ

೩. ದೇಶಾದ್ಯಂತ ಚಾಲಕ ತರಬೇತಿ ಸಂಸ್ಥೆ ಸ್ಥಾಪನೆಗೆ ಯೋಜನೆ ಘೋಷಿಸಿದ ಕೇಂದ್ರ ಸಚಿವ ನಿತಿನ್ ಗಡ್ಕರಿ

೪. ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ; ಮಹಿಳಾ ಡಬಲ್ಸ್‌ನ ೧೬ನೇ ಸುತ್ತಿನ ಪಂದ್ಯದಲ್ಲಿಂದು ಭಾರತದ ಜೋಡಿ ಸೆಣಸು

**<><*<><>*><>**

ಪ್ರಧಾನಮಂತ್ರಿ ನರೇಂದ್ರಮೋದಿ ಅವರು ಇಂದು ಆಂಧ್ರಪ್ರದೇಶಕ್ಕೆ ಭೇಟಿ ನೀಡಲಿದ್ದು, ವಿಶಾಖಪಟ್ಟಣಂನಲ್ಲಿ ೨ ಲಕ್ಷ ಕೋಟಿ ರೂಪಾಯಿ ವೆಚ್ಚದ ವಿವಿಧ ಯೋಜನೆಗಳಿಗೆ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ೧ ಲಕ್ಷದ ೮೫ ಸಾವಿರ ಕೋಟಿ ರೂಪಾಯಿಗಳ ಅತ್ಯಾಧುನಿಕ ಎನ್‌ಟಿಪಿಸಿ ಗ್ರೀನ್ ಎನರ್ಜಿ ಲಿಮಿಟೆಡ್‌ನ, ಗ್ರೀನ್ ಹೈಡ್ರೋಜನ್ ಹಬ್ ಯೋಜನೆಗೆ ಪ್ರಧಾನಿ, ವಿಶಾಖಪಟ್ಟಣಂ ಬಳಿಯ ಪೂಡಿಮಢಾಕದಲ್ಲಿ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

**ಈ ಕುರಿತು ಒಂದು ವರದಿ...**

ಪ್ರಧಾನಿ ನರೇಂದ್ರ ಮೋದಿ ಅವರು, ಇಂದು ಸಂಜೆ ವಿಶಾಖಪಟ್ಟಣಕ್ಕೆ ಆಗಮಿಸಲಿದ್ದು, ಆಂಧ್ರಪ್ರದೇಶದಲ್ಲಿ ೧ ಲಕ್ಷಕ್ಕೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸುವ ಮತ್ತು ಪ್ರಾದೇಶಿಕ ಪ್ರಗತಿಗೆ ಉತ್ತೇಜನ ನೀಡುವ ಸಾಮರ್ಥ್ಯವಿರುವ, ಮೂಲಸೌಕರ್ಯ ಯೋಜನೆಗಳ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಲಿದ್ದಾರೆ. ಪ್ರಧಾನಿಯವರು ರೋಡ್ ಶೋನಲ್ಲಿ ಭಾಗವಹಿಸಲಿದ್ದು, ಬಳಿಕ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಮತ್ತು ಉಪಮುಖ್ಯಮಂತ್ರಿ ಕೆ.ಪವನ್ ಕಲ್ಯಾಣ್ ಅವರೊಂದಿಗೆ ಆಂಧ್ರ ಯೂನಿವರ್ಸಿಟಿ ಇಂಜಿನಿಯರಿಂಗ್ ಕಾಲೇಜು ಮೈದಾನದಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ. NTPC ಗ್ರೀನ್ ಹೈಡ್ರೋಜನ್ ಪ್ರಾಜೆಕ್ಟ್ ಜೊತೆಗೆ, ವಿಶಾಖಪಟ್ಟಣಂನಲ್ಲಿನ ದಕ್ಷಿಣ ಕರಾವಳಿ ರೈಲ್ವೆ ಪ್ರಧಾನ ಕಛೇರಿ, ಅನಕಾಪಲ್ಲಿ ಜಿಲ್ಲೆಯ ನಕ್ಕಪಲ್ಲಿಯಲ್ಲಿ, ಬಲ್ಕ್ ಡ್ರಗ್ ಪಾರ್ಕ್ ಸೇರಿದಂತೆ, ೧೯ ಸಾವಿರದ ೫೦೦ ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ ವಿವಿಧ ರೈಲ್ವೆ ಮತ್ತು ರಸ್ತೆ ಯೋಜನೆಗಳಿಗೆ ಪ್ರಧಾನಮಂತ್ರಿ ಅಡಿಪಾಯ ಹಾಕಲಿದ್ದಾರೆ. ಇದೇ ವೇಳೆ ಪ್ರಧಾನಿಯವರು, ಚೆನ್ನೈ- ಬೆಂಗಳೂರು ಕೈಗಾರಿಕಾ ಕಾರಿಡಾರ್

ಅಡಿಯಲ್ಲಿ, ತಿರುಪತಿ ಜಿಲ್ಲೆಯಲ್ಲಿ ನಿರ್ಮಾಣಗೊಳ್ಳಲಿರುವ ಕೈಗಾರಿಕಾ ಪ್ರದೇಶ- KRIS ನಗರಕ್ಕೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

**<><*<><>*><>**

ವಿ.ನಾರಾಯಣನ್ ಅವರನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ- ಇಸ್ರೋ ಹೊಸ ಅಧ್ಯಕ್ಷರಾಗಿ ಮತ್ತು ಬಾಹ್ಯಾಕಾಶ ಇಲಾಖೆಯ ಕಾರ್ಯದರ್ಶಿಯಾಗಿ ಕೇಂದ್ರ ಸರ್ಕಾರ ನೇಮಿಸಿದೆ. ನಾರಾಯಣನ್ ಅವರು ಇದೇ ೧೪ ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಅವರು ಇಸ್ರೋ ಹಾಲಿ ಅಧ್ಯಕ್ಷ ಎಸ್.ಸೋಮನಾಥ್ ಅವರ ಉತ್ತರಾಧಿಕಾರಿಯಾಗಲಿದ್ದಾರೆ. ನಾರಾಯಣನ್ ಪ್ರಸ್ತುತ, ಕೇರಳದ ವಲಿಯಮಾಲದಲ್ಲಿರುವ ಇಸ್ರೋದ ಲಿಕ್ವಿಡ್ ಪ್ರೊಪಲ್ಷನ್ ಸಿಸ್ಟಮ್ಸ್ ಸೆಂಟರ್ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ರಾಕೆಟ್ ಮತ್ತು ಬಾಹ್ಯಾಕಾಶ ನೌಕೆಯ ಪ್ರೊಪಲ್ಷನ್‌ನಲ್ಲಿ ಅವರು, ಸುಮಾರು ನಾಲ್ಕು ದಶಕಗಳ ಅನುಭವ ಹೊಂದಿದ್ದು, ರಾಕೆಟ್ ಮತ್ತು ಬಾಹ್ಯಾಕಾಶ ನೌಕೆ ಪ್ರೊಪಲ್ಷನ್ ಪರಿಣಿತರಾಗಿದ್ದಾರೆ. ೧೯೮೪ ರಲ್ಲಿ ಇಸ್ರೋಗೆ ಸೇರಿದ ನಾರಾಯಣನ್, ಐPSಅ ಯ ನಿರ್ದೇಶಕರಾಗುವ ಮೊದಲು ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದರು.

**<><*<><>*><>**

ವಿದ್ಯಾರ್ಥಿಗಳಿಗೆ ಪರೀಕ್ಷೆಯ ಒತ್ತಡವನ್ನು ಕಲೆಯ ಮೂಲಕ ತಗ್ಗಿಸಬಹುದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಇದೇ ದೃಷ್ಟಿಕೋನದೊಂದಿಗೆ ಜನವರಿ ೪ ರಂದು ನವದೆಹಲಿಯಲ್ಲಿ ಆಯೋಜಿಸಲಾಗಿದ್ದ ಪರೀಕ್ಷಾರ್ಥಿಗಳ ಕಲಾ ಉತ್ಸವವನ್ನು ಅವರು ಶ್ಲಾಘಿಸಿದ್ದಾರೆ. ೯ ರಿಂದ ೧೨ ನೇ ತರಗತಿಯ ೩೦ ಶಾಲೆಗಳ ವಿದ್ಯಾರ್ಥಿಗಳು ತಮ್ಮ ಸೃಜನಶೀಲತೆಯನ್ನು ಪ್ರದರ್ಶಿಸಲು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಕಲಾ ಉತ್ಸವದ ಕುರಿತು ಪರೀಕ್ಷಾರ್ಥಿಗಳ ಸಾಮಾಜಿಕ ಮಾಧ್ಯಮದ ಪೋಸ್ಟ್‌ಗಳಿಗೆ ಪ್ರತಿಕ್ರಿಯಿಸಿರುವ ಪ್ರಧಾನಿ, ಯುವಕರು ಒಗ್ಗೂಡಿ ಒತ್ತಡ ರಹಿತ ಪರೀಕ್ಷೆಗಳ ಸಂದೇಶವನ್ನು ರವಾನಿಸಲು ಕಲೆಯ ಶಕ್ತಿಯನ್ನು ಬಳಸಿಕೊಂಡಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

**<><*<><>*><>**

ಹದಿನೆಂಟನೇ ಆವೃತ್ತಿಯ ಪ್ರವಾಸಿ ಭಾರತೀಯ ದಿವಸ್ ಇಂದಿನಿಂದ ಮೂರು ದಿನಗಳ ಕಾಲ ಒಡಿಶಾದ ರಾಜಧಾನಿಯಲ್ಲಿ ನಡೆಯಲಿದೆ. ಭಾರತ ಮತ್ತು ವಿದೇಶಗಳಿಂದ ೧೦ ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಮೂರು ದಿನಗಳ ಮಹಾ ಸಮಾರಂಭದಲ್ಲಿ ಪಾಲ್ಗೊಳ್ಳುವ ಸಾಧ್ಯತೆಯಿದೆ. ೧೯೧೫ ರಲ್ಲಿ ಮಹಾತ್ಮ ಗಾಂಧಿಯವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗಿದ ನೆನಪಿಗಾಗಿ ಜನವರಿ ೯ ರಂದು ಪ್ರವಾಸಿ ಭಾರತೀಯ ದಿವಸ್ ಅನ್ನು ಆಚರಿಸಲಾಗುತ್ತದೆ. ಈ ವರ್ಷದ ಪ್ರವಾಸಿ ಭಾರತೀಯ ದಿನದ ಸಂಭ್ರಮಾಚರಣೆಯಲ್ಲಿ ಪಾಲ್ಗೊಳ್ಳಲು ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್, ಭುವನೇಶ್ವರಕ್ಕೆ ನಿನ್ನೆ ಆಗಮಿಸಿದರು. ಬಳಿಕ ಅವರು ಕೋನಾರ್ಕ್‌ನಲ್ಲಿರುವ ಸೂರ್ಯ ದೇವಾಲಯ ಮತ್ತು ಪುರಿ ಜಗನಾಥ್ ದೇವಾಲಯಕ್ಕೆ ಭೇಟಿ ನೀಡಿದರು.

**<><*<><>*><>**

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು, ದೇಶಾದ್ಯಂತ ಚಾಲಕ ತರಬೇತಿ ಸಂಸ್ಥೆ -ಡಿಟಿಐ ಗಳ ಸ್ಥಾಪನೆ ಯೋಜನೆ ಘೋಷಿಸಿದ್ದಾರೆ. ಇದು ಡಿಟಿಐಗಳನ್ನು ಸ್ಥಾಪಿಸಲು ಪ್ರೋತ್ಸಾಹ ಮತ್ತು ಸ್ವಯಂಚಾಲಿತ ಪರೀಕ್ಷಾ ಕೇಂದ್ರಗಳು ಮತ್ತು ಡಿಟಿಐಗಳ ಸಮಗ್ರ ಮೂಲಸೌಕರ್ಯಕ್ಕೆ ಪ್ರೋತ್ಸಾಹ ನೀಡಲಿದೆ. ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಸಚಿವ

ನಿತಿನ್ ಗಡ್ಕರಿ, ದೇಶದಲ್ಲಿ ನುರಿತ ಚಾಲಕರ ಕೊರತೆಯಿದ್ದು, ದೇಶದಲ್ಲಿ ಹೆಚ್ಚಿನ ಚಾಲನಾ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

**<><*<><>*><>**

ಮಾಲ್ಡೀವ್ಸ್ ರಕ್ಷಣಾ ಸಚಿವ ಮೊಹಮ್ಮದ್ ಘಾಸನ್ ಮೌಮೂನ್ ಇಂದಿನಿಂದ ಭಾರತಕ್ಕೆ ಮೂರು ದಿನಗಳ ಪ್ರವಾಸ ಕೈಗೊಳ್ಳಲಿದ್ದು, ಈ ಸಂದರ್ಭದಲ್ಲಿ ಗೋವಾ ಮತ್ತು ಮುಂಬೈಗೆ ಭೇಟಿ ನೀಡಲಿದ್ದಾರೆ. ನವದೆಹಲಿಯಲ್ಲಿಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್, ಮಾಲ್ಡೀವ್ಸ್ ಸಹವರ್ತಿ ಮೊಹಮ್ಮದ್ ಘಾಸನ್ ಮೌಮೂನ್ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ. ಮಾತುಕತೆಯ ಸಮಯದಲ್ಲಿ, ಉಭಯ ನಾಯಕರು ತರಬೇತಿ, ನಿಯಮಿತ ಮಿಲಿಟರಿ ವ್ಯಾಯಾಮಗಳು ಮತ್ತು ರಕ್ಷಣಾ ಯೋಜನೆಗಳು ಸೇರಿದಂತೆ ದ್ವಿಪಕ್ಷೀಯ ರಕ್ಷಣಾ ಸಹಕಾರದ ವಿವಿಧ ಅಂಶಗಳನ್ನು ಪರಿಶೀಲಿಸಲಿದ್ದಾರೆ. ಭಾರತ ಮತ್ತು ಮಾಲ್ಡೀವ್ಸ್ ಐತಿಹಾಸಿಕ ಸಂಬಂಧ ಹೊಂದಿದ್ದು, ಹಿಂದೂ ಮಹಾಸಾಗರ ಪ್ರದೇಶದಲ್ಲಿ ಸ್ಥಿರತೆ ಮತ್ತು ಸಮೃದ್ಧಿಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿರುವ ಭಾರತದ 'ನೆರೆಹೊರೆಯ ಮೊದಲ' ನೀತಿಯಲ್ಲಿ ಮಾಲ್ಡೀವ್ಸ್ ವಿಶೇಷ ಸ್ಥಾನವನ್ನು ಹೊಂದಿದೆ.

**<><*<><>*><>**

ದೆಹಲಿಯಲ್ಲಿ ಇಂದಿನಿಂದ ಫಾರ್ಮ್-ಟು-ಫೋರ್ಕ್ ವ್ಯಾಪಾರ ಪ್ರದರ್ಶನ, 'ಇಂಡಸ್‌ಫುಡ್ ೨೦೨೫' ಪ್ರಾರಂಭಗೊಳ್ಳಲಿದೆ. ೩೦ ಕ್ಕೂ ಹೆಚ್ಚು ದೇಶಗಳಿಂದ ೨ ಸಾವಿರದ ೩೦೦ ಕ್ಕೂ ಹೆಚ್ಚು ಪ್ರದರ್ಶಕರು ಇದರಲ್ಲಿ ಭಾಗವಹಿಸಲಿದ್ದಾರೆ. ಕೇಂದ್ರ ಆಹಾರ ಸಂಸ್ಕರಣಾ ಕೈಗಾರಿಕೆಗಳ ಸಚಿವ ಚಿರಾಗ್ ಪಾಸ್ವಾನ್ ಕಾರ್ಯಕ್ರಮದ ೮ನೇ ಆವೃತ್ತಿಯನ್ನು ಉದ್ಘಾಟಿಸಲಿದ್ದಾರೆ.

**ಈ ಕುರಿತು ಒಂದು ವರದಿ**

ಇಂಡಸ್‌ಫುಡ್ ಸಮಗ್ರ ವ್ಯಾಪಾರ ಮೇಳದಲ್ಲಿ ೭ ಸಾವಿರದ ೫೦೦ ಅಂತಾರಾಷ್ಟ್ರೀಯ ಖರೀದಿದಾರರು ಮತ್ತು ೧೫ ಸಾವಿರ ಭಾರತೀಯ ವ್ಯಾಪಾರ ವೀಕ್ಷಕರು ಪಾಲ್ಗೊಳ್ಳುವ ನಿರೀಕ್ಷೆ ಇದೆ. 'ಇಂಡಸ್‌ಫುಡ್ ೨೦೨೫' ವ್ಯವಹಾರ ವಿಸ್ತರಣೆಗೆ ಉತ್ತೇಜನ ನೀಡುತ್ತದೆ ಮತ್ತು ಮಾರುಕಟ್ಟೆ ಜ್ಞಾನವನ್ನು ಒದಗಿಸುತ್ತದೆ. ಈ ವರ್ಷದ ಆವೃತ್ತಿಯಲ್ಲಿ ೩೫ ಅಂತಾರಾಷ್ಟ್ರೀಯ ಅಡುಗೆ ಭಟ್ಟರು ಮತ್ತು ೧೦೦ ಭಾರತೀಯ ಪ್ರತಿನಿಧಿಗಳು, ವೃತ್ತಿಪರರು ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ನೇಪಥ್ಯದಲ್ಲಿ ಆಹಾರ ಉತ್ಪಾದನೆ ಮತ್ತು ಕೃಷಿ ತಂತಜ್ಞಾನ ಕ್ಷೇತ್ರಗಳ ಮೇಲೆ ಕೇಂದ್ರೀಕರಿಸಿದ ಎರಡು ಶೃಂಗಸಭೆಗಳು ನಡೆಯಲಿವೆ.

**<><*<><>*><>**

ದೆಹಲಿ ವಿಧಾನಸಭಾ ಚುನಾವಣೆಯ ವೇಳಾಪಟ್ಟಿಯನ್ನು ಕೇಂದ್ರ ಚುನಾವಣಾ ಆಯೋಗ ಪ್ರಕಟಿಸಿದೆ. ೭೦ ಸದಸ್ಯರ ದೆಹಲಿ ವಿಧಾನಸಭೆ ಚುನಾವಣೆಯ ಮತದಾನ ಫೆಬ್ರವರಿ ೫ ರಂದು ನಡೆಯಲಿದ್ದು, ಫೆಬ್ರವರಿ ೮ ರಂದು ಮತ ಎಣಿಕೆ ಕಾರ್ಯ ನಡೆಯಲಿದೆ. ನವದೆಹಲಿಯಲ್ಲಿ ನಿನ್ನೆ ಸುದ್ದಿಗಾರರಿಗೆ ಮಾಹಿತಿ ನೀಡಿದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್, ಈ ಕುರಿತು ಇದೇ ೧೦ರಂದು ಅಧಿಸೂಚನೆ ಹೊರಡಿಸಲಾಗುವುದು. ನಾಮಪತ್ರ ಸಲ್ಲಿಸಲು ಇದೇ ೧೭ ಕೊನೆಯ ದಿನವಾಗಿದ್ದು, ಇದೇ ೧೮ ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಇದೇ ೨೦ ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದೆ. ೧ ಕೋಟಿ ೫೫ ಲಕ್ಷ ಮತದಾರರಿಗೆ ಸೌಲಭ್ಯವನ್ನು ಕಲ್ಪಿಸಲು ೧೩ ಸಾವಿರದ ೩೩ ಮತಗಟ್ಟೆಗಳ ವ್ಯವಸ್ಥೆ ಮಾಡಲಾಗುತ್ತದೆ ಎಂದರು. ಪ್ರಸ್ತುತ ದೆಹಲಿ ವಿಧಾನಸಭೆಯ ಅವಧಿ ಮುಂದಿನ ತಿಂಗಳ ೨೩ ರಂದು ಮುಕ್ತಾಯಗೊಳ್ಳಲಿದೆ.

**<><*<><>*><>**

ಇ-ಶ್ರಮ್ ಪೋರ್ಟಲ್, ಅಸಂಘಟಿತ ಕಾರ್ಮಿಕರಿಂದ ದಿನಕ್ಕೆ ಸರಾಸರಿ ೩೦ ಸಾವಿರಕ್ಕೂ ಹೆಚ್ಚು ನೋಂದಣಿಗಳಿಗೆ ಸಾಕ್ಷಿಯಾಗುತ್ತಿದೆ ಎಂದು ಕಾರ್ಮಿಕ ಮತ್ತು ಉದ್ಯೋಗ ಸಚಿವ ಡಾ.ಮನ್ಸುಖ್ ಮಾಂಡವಿಯಾ ಹೇಳಿದ್ದಾರೆ. ನವದೆಹಲಿಯಲ್ಲಿ ನಿನ್ನೆ ಇ-ಶ್ರಮ್ ಪೋರ್ಟಲ್‌ನ ಬಹುಭಾಷಾ ವ್ಯವಸ್ಥೆಗೆ ಚಾಲನೆ ನೀಡಿ ಮಾತನಾಡಿದ ಅವರು, ಪೋರ್ಟಲ್‌ನಲ್ಲಿ ನೋಂದಣಿಯಿಂದಾಗಿ ಸಾಮಾಜಿಕ ಭದ್ರತಾ ಯೋಜನೆಗಳು ಮತ್ತು ಉಪಕ್ರಮಗಳಿಗೆ ಪ್ರವೇಶ ಪಡೆಯಲು ಕಾರ್ಮಿಕರಿಗೆ ಅನುಕೂಲವಾಗುತ್ತದೆ ಎಂದು ಹೇಳಿದರು.

**<><*<><>*><>**

ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿಂದು ಭಾರತದ ತ್ರಿಶಾ ಜಾಲಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿ ಕೌಲಾಲಂಪುರದಲ್ಲಿ ನಡೆಯುವ ಮಹಿಳಾ ಡಬಲ್ಸ್ ವಿಭಾಗದ ೧೬ನೇ ಸುತ್ತಿನ ಪಂದ್ಯದಲ್ಲಿ, ಚೀನಾದ ಜಾಂಗ್ ಶುಕ್ಸಿಯಾನ್ ಮತ್ತು ಜಿಯಾ ಯಿಫಾನ್ ಜೋಡಿಯನ್ನು ಎದುರಿಸಲಿದೆ. ಭಾರತದ ಜೋಡಿ, ತಮ್ಮ ಆರಂಭಿಕ ಸುತ್ತಿನ ಪಂದ್ಯದಲ್ಲಿ ಥಾಯ್ಲೆಂಡ್‌ನ ಓರ್ನಿಚಾ ಜೊಂಗ್‌ಸಥಾಪೋರ್ನ್‌ಪಾರ್ನ್ ಮತ್ತು ಸುಕಿತ್ತಾ ಸುವಾಚಾಯ್ ಅವರನ್ನು ೨೧-೧೦, ೨೧-೧೦ ರಿಂದ ಸೋಲಿಸಿತು. ಮತ್ತೊಂದೆಡೆ, ಭಾರತದ ತಾರಾ ಷಟ್ಲರ್, ಲಕ್ಷ್ಯಸೇನ್ ೧೪-೨೧, ೭-೨೧ ನೇರ ಗೇಮ್‌ಗಳಲ್ಲಿ, ಚೈನೀಸ್ ತೈಪೆಯ, ಚಿಯು-ಜೆನ್ ವಿರುದ್ಧ ಮೊದಲ ಸುತ್ತಿನಲ್ಲೇ ಸೋಲು ಅನುಭವಿಸಿ, ಪಂದ್ಯಾವಳಿಯಿಂದ ಹೊರಬಿದ್ದಿದ್ದಾರೆ. 'ಇಂದಿನ ಪ್ರಮುಖ ಪಂದ್ಯಗಳಲಿ, ಭಾರತದ ಮಾಳವಿಕಾ ಬನ್ಸೋಡ್, ಮಲೇಷ್ಯಾದ ಗೊಹ್ ಜಿನ್ ವೀ ಅವರನ್ನು ಎದುರಿಸಲಿದ್ದರೆ, ಆಕರ್ಷಿ ಕಶ್ಯಪ್, ಡ್ಯಾನಿಶ್ ಷಟ್ಲರ್ ಜೂಲಿ ಜಾಕೋಬ್ಸೆನ್ ಅವರೊಂದಿಗೆ ಸೆಣಸಲಿದ್ದಾರೆ. ೩೨ರ ಸುತ್ತಿನಲ್ಲಿ ಅನುಪಮಾ ಉಪಾಧ್ಯಾಯ, ಥಾಯ್ಲೆಂಡ್‌ನ ಪೋರ್ನ್ಪಾವೀ ಚೋಚುವಾಂಗ್ ಅವರನ್ನು ಮುಖಾಮುಖಿಯಾಗಲಿದ್ದಾರೆ. ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಪ್ರಿಯಾಂಶು ರಾಜಾವತ್, ಚೀನಾದ ಲಿ ಶಿಫೆಂಗ್ ವಿರುದ್ಧ ಸೆಣಸಲಿದ್ದಾರೆ.

**<><*<><>*><>**

ಕತಾರ್‌ನ ದೋಹಾದ ಲುಸೈಲ್ ಸ್ಪೋರ್ಟ್ಸ್ ಅರೆನಾದಲ್ಲಿ ನಡೆಯುತ್ತಿರುವ, ವಿಶ್ವ ಟೇಬಲ್ ಟೆನಿಸ್ ಸ್ಟಾರ್ ಕಂಟೆಂಡರ್ ಟೂರ್ನಿಯಲ್ಲಿ ನಿನ್ನೆ ನಡೆದ ಮೊದಲ ಅರ್ಹತಾ ಸುತ್ತಿನ ಪಂದ್ಯದಲ್ಲಿ ಭಾರತೀಯ ಮಿಶ್ರ ಜೋಡಿ, ಮಾನವ್ ಠಕ್ಕರ್ ಮತ್ತು ಮನಿಕಾ ಬಾತ್ರಾ, ಫ್ರೆಂಚ್ ಜೋಡಿ ಫ್ಲೇವಿಯನ್ ಕಾಟನ್ ಮತ್ತು ಚಾರ್ಲೆಟ್ ಲುಟ್ಜ್ ಅವರನ್ನು ೩-೧ ರಿಂದ ಪರಾಭವಗೊಳಿಸಿದ್ದಾರೆ. ಇಂದು ಅವರು ೧೬ರ ಸುತ್ತಿನಲ್ಲಿ ಚೀನಾದ ಯುವಾನ್ಯು ಚೆನ್ ಮತ್ತು ಯಿ ಚೆನ್ ಜೋಡಿಯನ್ನು ಎದುರಿಸಲಿದ್ದಾರೆ.